# ಭಾವುಕತೆಗೆ ಒಳಗಾಗದೇ ಪಾಠ ಬೋಧನೆ

▪ ರಾಜು ಉಸ್ತಾದ ಬೆಳಗಾವಿ

ನಾಡಿನಾದ್ಯಂತ ತೀವ್ರ ಕುತೂಹಲ ಕೆರಳಿಸಿದ್ದ ಜಾಗತಿಕ ವೈದ್ಯ ವಿಜ್ಞಾನದ ಗಮನ ಸೆಳೆದಿದ್ದ ವೈದ್ಯರ ಮಗ ತನ್ನ ತಂದೆಯ ದೇಹ ಛೇದಿಸುವ ಕ್ರಾಂತಿಕಾರಿ ಕಾರ್ಯ ಶನಿವಾರ ಇಲ್ಲಿ ನಡೆಯಿತು.

ಇಲ್ಲಿನ ಕೆಎಲ್ಇ ಬಿ.ಎಂ. ಕಂಕಣವಾಡಿ ಆಯುರ್ವೇದ ಮಹಾವಿದ್ಯಾಲಯದಲ್ಲಿ ಸಹ ಪ್ರಾಧ್ಯಾಪಕರಾಗಿರುವ ಡಾ.ಮಹಾಂತೇಶ ಬಿ. ರಾಮಣ್ಣವರ ಈ ಕಾರ್ಯ ಮಾಡಿ ಹೊಸ ದಾಖಲೆ ಬರೆದರು.

ತಮ್ಮದೇ ಕಾಲೇಜಿನಲ್ಲಿ ಸಂಜೆ 4.20 ಕ್ಕೆ ವೈದ್ಯಕೀಯ ಉಪಕರಣಗಳ ಮೂಲಕ ತಂದೆ ಬಸವಣ್ಣೆಪ್ಪ ಎಸ್. ರಾಮಣ್ಣವರ ಅವರ ದೇಹ ಛೇದಿಸಿ ವಿದ್ಯಾರ್ಥಿಗಳಿಗೆ ಪಾಠ ಮಾಡಿದರು. ವೈದ್ಯ ವಿಜ್ಞಾನದ ಇತಿಹಾಸದಲ್ಲಿ ಇಂಥ ಪ್ರಕರಣ ಮೊದಲಿನದಾಗಿದೆ.

ವೈದ್ಯಶಾಸ್ತ್ರದ ಕನ್ನಿಂಗ್ ಹ್ಯಾಮ್ ಮ್ಯಾನ್ಯೂಯೆಲ್ ಬುಕ್ ಪ್ರಕಾರ ಹಿಂದಿನ ದಿನ ಶವದ ಮೇಲೆ ಮಾಡಿದ್ದ ಗುರುತಿನ ಮೇಲೆ ಡಾ.ಮಹಾಂತೇಶ ಅವರ ವೈದ್ಯಕೀಯ ಉಪಕರಣಗಳು ಹರಿದಾಡಿದವು. ಶವದ ಎದೆ ಗೂಡಿನ ಕೆಳಭಾಗದ ಮಧ್ಯದ ಬಿಂದುವಿನಲ್ಲಿ ಮೊದಲ ಸ್ಪರ್ಶ ಮಾಡಿದ ಸೂಕ್ಷ್ಮ ಚೂರಿ, ನಿಧಾನಕ್ಕೆ ಕುತ್ತಿಗೆ ಕೆಳಭಾಗದ ಮಧ್ಯ ಬಿಂದುವನ್ನು ತಲುಪಿತು. ನಂತರ ಭುಜದ ಮೇಲ್ಗಡೆ ಹೋಗಿ ಎದೆ ಭಾಗದ ಕೇಂದ್ರಕ್ಕೆ ಬಂದಿತು. ಅಲ್ಲಿಂದ ಬಲ ರಟ್ಟೆಯ ಮುಂಭಾಗದ ಛೇದನ ಮಾಡಿತು.

**ಸುಮಾರು 35 ನಿಮಿಷ...:** ನಂತರ ಡಾ.ಮಹಾಂತೇಶ ಬಿಎಎಂಎಸ್ ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಎದೆಯ ಗೂಡಿನ ಬಗ್ಗೆ ಪಾಠ ಆರಂಭಿಸಿ ಶವಛೇದನದ ಬಗ್ಗೆ ತಿಳಿಸಿದರು. ಇದು ಸುಮಾರು 35 ನಿಮಿಷ ನಡೆಯಿತು. ಪಾಠ ಮತ್ತು ವಿದ್ಯಾರ್ಥಿಗಳ ಪ್ರಶ್ನೋತ್ತರ ನಂತರ ಶವವನ್ನು ಮತ್ತೆ ಫಾರ್ಮಲೀನ್ ಮಿಶ್ರಣದ ನೀರಿನ ತೊಟ್ಟಿಯಲ್ಲಿ ಇಡಲಾಯಿತು. ಇಂದಿನ ಪಾಠಕ್ಕೆ ಬೇಕಿರುವಷ್ಟೇ ಶವದ ಛೇದನ ನಡೆಯಿತು.

ಡಾ. ಮಹಾಂತೇಶ ಹತ್ತು ವರ್ಷಗಳ ತಮ್ಮ ವೈದ್ಯಕೀಯ ವೃತ್ತಿ ಮತ್ತು ಉಪನ್ಯಾಸ ಸೇವೆಯಲ್ಲಿ 6-7 ಶವಗಳ ಛೇದನ ಮಾಡಿದ್ದಾರೆ. ತಮಗಿರುವ ಅನುಭವ ಮತ್ತು ತಮ್ಮ ಶಿಕ್ಷಕರು ಕಲಿಸಿದ್ದ ಜ್ಞಾನವನ್ನು ವಿದ್ಯಾರ್ಥಿಗಳಿಗೆ ಧಾರೆ ಎರೆದರು. ಪಾಠ ಮತ್ತು ದೇಹ ಛೇದನದ ಕೆಲಸ ಮುಗಿದಾಗ 4.55 ಗಂಟೆಯಾಗಿತ್ತು.

ಡಾ.ಮಹಾಂತೇಶ ಮೊದಲು ತಂದೆ ಡಾ.ಬಿ.ಎಸ್. ರಾಮಣ್ಣವರ ಮತ್ತು ದಧೀಚಿ ಮುನಿಯ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದರು. ನಂತರ ಟೇಬಲ್ ಮೇಲೆ ಶವ ಇಟ್ಟಿದ್ದ ಎತ್ತರದ ಕಟ್ಟೆ ಏರುವ ಮೊದಲು ತಾಯಿ ಡಾ. ಸುಶೀಲಾದೇವಿ ರಾಮಣ್ಣವರ ಪಾದಕ್ಕೆ ನಮಸ್ಕರಿಸಿ, ಪಕ್ಕದಲ್ಲಿದ್ದ ಪತ್ನಿ ಡಾ.ಸುರೇಖಾ ಅವರ ಶುಭೇಚ್ಛೆ ಪಡೆದುಕೊಂಡರು. ನಂತರ ತಂದೆಯ ಶವದ ಬಳಿಗೆ ಹೋಗಿ ನಮಸ್ಕರಿಸಿ, ಭಾವುಕತೆಗೆ ಒಳಗಾಗದೇ ವಿದ್ಯಾರ್ಥಿಗಳಿಗೆ ಪೂರ್ವ ಪೀಠಿಕೆ ನೀಡಿ ದೇಹ ಛೇದನಕ್ಕೆ ಅಣಿಯಾದರು.

ಇದಕ್ಕೂ ಮೊದಲು ಡಾ.ಮಹಾಂತೇಶ ಅವರು ಕಾಲೇಜಿನ ಸಭಾಗೃಹದಲ್ಲಿ ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರಿಗೆ ದೇಹದಾನದ ಮಹತ್ವ ಕುರಿತು ಉಪನ್ಯಾಸ ನೀಡಿದರು. ಆ ಬಗ್ಗೆ ವಿಡಿಯೊ ಪ್ರದರ್ಶನ ಮಾಡಲಾಯಿತು. ಡಾ. ಪ್ರಭಾಕರ ಕೋರೆಯವರು ಡಾ.ಸುಶೀಲಾದೇವಿ ರಾಮಣ್ಣವರ ಮತ್ತು ಡಾ. ಮಹಾಂತೇಶ ರಾಮಣ್ಣವರ ಅವರನ್ನು ಸನ್ಮಾನಿಸಿ, ಅಭಿನಂದಿಸಿದರು. ಮಹಾಂತೇಶ ಅವರಿಗೆ ವೈದ್ಯಕೀಯ ವಿಜ್ಞಾನದ ಬೋಧನೆ ಮಾಡಿದ ಉಡುಪಿಯ ಎಸ್‌ಡಿಎಂ ಕಾಲೇಜಿನ ಶಿಕ್ಷಕರು ಶುಭ ಹಾರೈಸಿದರು.

## ತಂದೆಯ ದೇಹ ಛೇದಿಸಿದ ಮಗ



ತಂದೆಯ ದೇಹ ಛೇದನಕ್ಕೂ ಮುನ್ನ ಪಾದಗಳಿಗೆ ನಮಸ್ಕರಿಸಿದ ಡಾ. ಮಹಾಂತೇಶ ಬಿ. ರಾಮಣ್ಣವರ.

**ತಂದೆಯ ಇಚ್ಛೆ ಮತ್ತು ವೈದ್ಯ ವೃತ್ತಿ ಎರಡನ್ನೂ ನಿಭಾಯಿಸಿದ ತೃಪ್ತಿ ಇದೆ. ಇದಕ್ಕೆ ಕುಟುಂಬ ಅಷ್ಟೇ ಅಲ್ಲ ಹೊರಗಿನವರೂ ಧೈರ್ಯ ಕೊಟ್ಟಿದ್ದಾರೆ. ದೇಹದಾನ ಮತ್ತು ವೈದ್ಯಕೀಯ ವಿಜ್ಞಾನಕ್ಕೆ ಇದೊಂದು ಮಾದರಿಯಾಗಬೇಕು. ಜೀವನದ ಬಗ್ಗೆ ತೀರ ಆಳಕ್ಕೆ ಹೋದರೆ ಏನೂ ಇಲ್ಲ, ಎಲ್ಲವೂ ನಶ್ವರ ಎನಿಸುತ್ತದೆ. ನಿತ್ಯ ಬಡಿದಾಡುವುದರಲ್ಲಿ ಅರ್ಥವಿಲ್ಲ ಎಂದು ಭಾಸವಾಗುತ್ತದೆ. ಆದರೆ, ಅನಗತ್ಯವಾಗಿ ಈ ಕಲ್ಪನೆ ಮಾಡಿಕೊಳ್ಳುವುದು ಬೇಡ. ಜೀವನದ ಸಾರ್ಥಕತೆ ಹುಡುಕಬೇಕಿದೆ.**

**-ಡಾ. ಮಹಾಂತೇಶ ರಾಮಣ್ಣವರ**

# ಭಾವುಕತೆಗೆ ಒಳಗಾಗದೇ ಪಾಠ ಬೋಧನೆ

• ರಾಜು ಉಸ್ತಾದ ಬೆಳಗಾವಿ

ನಾಡಿನಾದ್ಯಂತ ತೀವ್ರ ಕುತೂಹಲ ಕೆರಳಿಸಿದ್ದ, ಜಾಗತಿಕ ವೈದ್ಯ ವಿಜ್ಞಾನದ ಗಮನ ಸೆಳೆದಿದ್ದ ವೈದ್ಯರ ಮಗ ತನ್ನ ತಂದೆಯ ದೇಹ ಛೇದಿಸುವ ಕ್ರಾಂತಿಕಾರಿ ಕಾರ್ಯ ಶನಿವಾರ ಇಲ್ಲಿ ನಡೆಯಿತು.

ಇಲ್ಲಿನ ಕೆಎಲ್‌ಇ ಬಿ.ಎಂ. ಕಂಕಣವಾಡಿ ಆಯುರ್ವೇದ ಮಹಾವಿದ್ಯಾಲಯದಲ್ಲಿ ಸಹ ಪ್ರಾಧ್ಯಾಪಕರಾಗಿರುವ ಡಾ. ಮಹಾಂತೇಶ ಬಿ. ರಾಮಣ್ಣವರ ಈ ಕಾರ್ಯ ಮಾಡಿ ಹೊಸ ದಾಖಲೆ ಬರೆದರು.

ತಮ್ಮದೇ ಕಾಲೇಜಿನಲ್ಲಿ ಸಂಜೆ 4.20 ಕ್ಕೆ ವೈದ್ಯಕೀಯ ಉಪಕರಣಗಳ ಮೂಲಕ ತಂದೆ ಬಸವಣ್ಣೆಪ್ಪ ಎಸ್. ರಾಮಣ್ಣವರ ಅವರ ದೇಹ ಛೇದಿಸಿ ವಿದ್ಯಾರ್ಥಿಗಳಿಗೆ ಪಾಠ ಮಾಡಿದರು. ವೈದ್ಯ ವಿಜ್ಞಾನದ ಇತಿಹಾಸದಲ್ಲಿ ಇಂಥ ಪ್ರಕರಣ ಮೊದಲನೆಯದಾಗಿದೆ.

## ತಂದೆಯ ದೇಹ ಛೇದಿಸಿದ ಮಗ



ತಂದೆಯ ದೇಹ ಛೇದನಕ್ಕೂ ಮುನ್ನ ಪಾದಗಳಿಗೆ ನಮಸ್ಕರಿಸಿದ ಡಾ. ಮಹಾಂತೇಶ ಬಿ. ರಾಮಣ್ಣವರ.

**ತಂದೆಯ ಇಚ್ಛೆ ಮತ್ತು ವೈದ್ಯ ವೃತ್ತಿ ಎರಡನ್ನೂ ನಿಭಾಯಿಸಿದ ತೃಪ್ತಿ ಇದೆ. ಇದಕ್ಕೆ ಕುಟುಂಬ ಆಪ್ತರು ಅಲ್ಲದೇ ಹೊರಗಿನವರೂ ಧೈರ್ಯ ಕೊಟ್ಟಿದ್ದಾರೆ. ದೇಹದಾನ ಮತ್ತು ವೈದ್ಯಕೀಯ ವಿಜ್ಞಾನಕ್ಕೆ ಇದೊಂದು ಮಾದರಿಯಾಗಬೇಕು. ಜೀವನದ ಬಗ್ಗೆ ತೀರ ಆಳಕ್ಕೆ ಹೋದರೆ ಏನೂ ಇಲ್ಲ, ಎಲ್ಲವೂ ನಶ್ವರ ಎನಿಸುತ್ತದೆ. ನಿತ್ಯ ಬಡಿದಾಡುವುದರಲ್ಲಿ ಅರ್ಥವಿಲ್ಲ ಎಂದು ಭಾಸವಾಗುತ್ತದೆ. ಆದರೆ, ಅನಗತ್ಯವಾಗಿ ಈ ಕಲ್ಪನೆ ಮಾಡಿಕೊಳ್ಳುವುದು ಬೇಡ. ಜೀವನದ ಸಾರ್ಥಕತೆ ಹುಡುಕಬೇಕಿದೆ.**

-ಡಾ. ಮಹಾಂತೇಶ ರಾಮಣ್ಣವರ